## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಲಿಖಿತ ಮೂಲಕ ಉತ್ತರಿಸುವ ರೀತಿಯ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

## ಜನತಾ ಮನೆಗಳ ನಿರ್ಮಾಣದ ಬಗ್ಗೆ.

೫೦೦. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ವಸತಿ ಮಂತ್ರಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜನತಾ ಮತ್ತು ಕಡಿಮೆ ವೆಚ್ಚದ ಮನೆಗಳ ನಿರ್ಮಾಣ ಹಣದ ಅಭಾವದಿಂದ ಸ್ಥಗಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸಾವಿರಾರು ಜನತಾ ಮನೆಗಳು ನಿರ್ಮಾಣವಾಗಿ ಎರಡು ವರ್ಷಗಳು ಸಂದರೂ ಅವರಿಗೆ ಪೂರ್ಣ ಹಣ ಸಂದಾಯವಾಗದಿರಲು ಕಾರಣವೇನು?

ಇ) ಎಷ್ಟು ಸಮಯದೊಳಗೆ ಸದರಿಯವರಿಗೆ ಪೂರ್ತಿ ಹಣ ಪಾವತಿ ಮಾಡುವ ವ್ಯವಸ್ಥೆ ಮಾಡಲಾಗುವುದು ?

ಈ) ಇನ್ನು ಮುಂದಾದರೂ ಕ್ಲಪ್ತ ಸಹಾಯಕ್ಕೆ ಹಣ ಪಾವತಿ ಮಾಡುವ ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ ಮಂತ್ರಿ ಮತ್ತು ವಕ್ಫ್ ಸಚಿವರು).—

ಅ) ಇಲ್ಲ,

ಆ) ಹುಡ್ಕೋ ಸಂಸ್ಥೆಯವರು ಪ್ರತಿ ಮನೆಗೆ ರೂ. ೨೫೦೦-೦೦ ಗಳಂತೆ ಮುಂಜೂರು ಮಾಡಬೇಕಾಗಿರುವ ಸಾಲದ ಹಣ ಸರ್ಕಾಲದಲ್ಲಿ ಬಾರದಿರುವುದರಿಂದ.

ಇ) ೧೯೮೫-೮೬ನೇ ಸಾಲಿನವರೆಗೆ ಹುಡ್ಕೋ ಸಂಸ್ಥೆಯಿಂದ ಬರಬೇಕಾಗಿರುವ ಸಾಲದ ಹಣ ವನ್ನು ಪಡೆಯಲು ಪ್ರಯತ್ನಿಸಲಾಗಿದೆ. ಬಂದ ತಕ್ಷಣ ಫಲಾನುಭವಿಗಳಿಗೆ ಕೊಡಲಾಗುವುದು.

ಈ) ಹೌದು.

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸುವ ಚಂದ್ರಾ ಬಡಾವಣೆಗೆ ೯೨ ರಸ್ತೆ ದೀಪಗಳನ್ನು ಹಾಕಿಸುವ ಬಗ್ಗೆ.

೫೬೫. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿರುವ ಚಂದ್ರಾ ಬಡಾವಣೆಯಲ್ಲಿ ರಸ್ತೆ ದೀಪ ಗಳನ್ನು ಇನ್ನೂ ಹಾಕದಿರಲು ಕಾರಣಗಳೇನು, ಹಾಗೂ ಅಲ್ಲಿನ ನಿವಾಸಿಗಳು ರಸ್ತೆ ದೀಪಗಳಿಲ್ಲದೆ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಬಡಾವಣೆಗೆ ಈ ಕೂಡಲೇ ರಸ್ತೆ ದೀಪಗಳನ್ನು ಹಾಕಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ಈ ಬಡಾವಣೆಯು ಪೂರ್ಣವಾಗಿ ಅಭಿವೃದ್ಧಿ ಹೊಂದದಿರುವುದರಿಂದ ಅಲ್ಲಿನ ರಸ್ತೆಗಳಿಗೆ ಬೀದಿ ದೀಪಗಳನ್ನು ಇದುವರೆಗೂ ಹಾಕಲಾಗಿಲ್ಲ.

ಇ) ಹೌದು.